**ಓ ಎಸ್ ನಂ: 442/2018**
**ಪಿ.ಡಬ್ಲ್ಯೂ -**
**ದಿನಾಂಕ: 29.01.2026**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ ವಿ ಡಿ ವಕೀಲರಿಂದ:**

ನನಗೆ ಕನ್ನಡ ಓದಲು ಬರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತು. ನಿವೇಶನ ಮತ್ತು ಮನೆಯ ಸಲುವಾಗಿ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ದಿ: 04.11.2022 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ನಮ್ಮ ಪತ್ರದ ಆಧಾರದ ಮೇಲೆ ನುಡಿಯುತ್ತಿದ್ದೆನೆ ಎನ್ನುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಸರ್ಕಾರಿ ನೌಕರರು ಎಂದು ತಿಳಿಸಿರುವುದಿಲ್ಲ. ಸಾಕ್ಷಿಗೆ ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಸರ್ಕಾರಿ ನೌಕರರು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ಸದರಿ ದಾವೆಯಲ್ಲಿ ಪ್ರತಿವಾದಿ-1 ರವರ ವಿಚಾರಣೆ ನಂತರ ನನ್ನ ವಿಚಾರಣೆ ಆಗುತ್ತಿರುವ ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ . ನಾನು ಪ್ರಮಾಣ ಪತ್ರದಲ್ಲಿ ನಮೂದಿಸಲಾದಂತಹ ಸ್ವತ್ತುಗಳು ಸೃಷ್ಟಿ ಮಾಡಿದಂತಹ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ . ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತಹ ಸ್ವತ್ತು ನನ್ನ ತಂದೆ ಕಟ್ಟಪ್ಪ ಮತ್ತು ತಾಯಿಯಿಂದ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಪ್ರತಿವಾದ ಪತ್ರದಲ್ಲಿ ಇರುವಂತಹ ಸ್ವತ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿ:

05.07.1954 ರಂದು ದಾನಪತ್ರದ ಮೂಲಕ ನನಗೆ ಸ್ವತ್ತು ಬಂದಿರುತ್ತದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಅದು ಸುಳ್ಳು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಂದಾಯವನ್ನು ಕಟ್ಟುವಾಗ ದಾಖಲಾತಿಯನ್ನು ಪರಿಶೀಲಿಸಿ ಕಂದಾಯ ಪಾವತಿಸಿಕೊಳ್ಳುತ್ತಾರೆ ಎಂದರೆ ಸರಿ. ಸಾದರಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಖಾಲಿ ಜಾಗ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ . ಅದರಲ್ಲಿ ಮನೆ ಇತ್ತು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದು ನಂತರ ಖಾತೆ ಬದಲಾವಣೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ನಿವೇಶನದಲ್ಲಿ ಮನೆಯನ್ನು ಕಟ್ಟಲು ಪಂಚಾಯತಿಯವರು ಪರಿಶೀಲನೆ ಮಾಡಿದ ನಂತರವೇ ಪರವಾನಗಿ ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೌಖಿಕ ವಿಭಾಗದ ಮೂಲಕ ನಮ್ಮ ತಂದೆ ತಾಯಿಯ ಮರಣಾನಂತರ ನನಗೆ ಮತ್ತು ನನ್ನ ಸಹೋದರರಿಗೆ ಸ್ವತ್ತುಗಳು ಬಂದಿರುತ್ತವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನನಗೆ ಯಾವುದೇ ಸ್ವತ್ತು ಇರುವುದಿಲ್ಲ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಯಾವುದೇ ಪಾಳು ಜಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆಮೊದಲು ಹಂಚಿನ ಮನೆ ಇದ್ದು ಅದನ್ನು ಕೆಡವಿ ಈಗ ಮನೆ ಕಟ್ಟಲು ತಯಾರಿ ಮಾಡುತ್ತಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲು ಮನೆ ಇತ್ತು ಈಗಲೂ ಸಹ ಮನೆ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಾವುದೇ ಸ್ವತ್ತು ಇರುವುದಿಲ್ಲ , ಪ್ರತಿವಾದಿಗಳಿಗೆ ನಾನೇ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಲ್ಲಿಹಲವು ಬಾರಿ ಕೇಳಿಕೊಂಡರು ನಾನು ಅವರಿಗೆ ಮತ್ತು ಅವರ ಸ್ವತ್ತಿಗೆ ತೊಂದರೆ ಕೊಡುತ್ತಿದ್ದು ಸುಳ್ಳು

ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ತಿಮ್ಮಯ್ಯನವರ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿರುವ ವಿಚಾರಗಳನ್ನು ಸದರಿ ದಾವಾ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ .

ಪ್ರತಿವಾದಿ ನನ್ನ ಮೇಲೆ ದಾವೆಯನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದ ಸ್ವತ್ತಿಗೆ ನಾನು ಅಡ್ಡಪಡಿಸುತ್ತಿದ್ದೇನೆ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಇರುವಂತಹ ಸ್ವತ್ತು ಪ್ರತಿವಾದಿಯರಿಗೆ ಅವರ ತಂದೆಯ ಮರಣಾನಂತರ ಪೌವತಿ ಆಧಾರದ ಮೇಲೆ ಪ್ರತಿವಾದಿಯರಿಗೆ ಬಂದಿರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಇರುವ ಸ್ವತ್ತಿಗೆ ನನಗೆ ಮತ್ತು ನನ್ನ ವಾರಸುದಾರರಿಗೆ ಹಕ್ಕು , ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಆ ಸ್ವತ್ತಿನಲ್ಲಿ ನಾನು ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿ 2 ಖಾತೆ ನಂಬರ್ ಗಳು ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ. ತಿಮ್ಮಯ್ಯನವರ ಖಾತೆ ನಂಬರ್ 63 , ಹೊಸ ಖಾತೆ ನಂಬರ್ 95 ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತಿಗೆ ಅಡ್ಡಿಪಡಿಸದಂತೆ ನಮಗೆ ತಿಳುವಳಿಕೆ ಹೇಳಿದರೂ ನಾನು ಮಾತು ಕೇಳಿರುವುದಿಲ್ಲ ಎಂದರೆ ಸುಳ್ಳು. ಪ್ರತಿವಾದಿಯರ ಸ್ವತ್ತಿನ ನಿವೇಶನ ವಿಸ್ತೀರ್ಣ 25 X 35 ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ 6 ಅಡಿ ರಸ್ತೆ ಮತ್ತು ಕದರಜ್ಜಿ ದಾಸಪ್ಪರ ಮನೆ ಎಂದರೆ ಸರಿಯಲ್ಲ , ಪಶ್ಚಿಮಕ್ಕೆ ಪಂಚಾಯತಿ ರಸ್ತೆ ಮತ್ತು ಜಯಮ್ಮನ ಮನೆ ಇದೆ ಎಂದರೆ ಸರಿಯಲ್ಲ , ಉತ್ತರಕ್ಕೆ ಪಂಚಾಯತಿ ರಸ್ತೆ , ದಕ್ಷಿಣಕ್ಕೆ ಪಂಚಾಯತಿ ರಸ್ತೆ ಬರುತ್ತದ ಎಂದರೆ ನನಗೆ ಗೊತ್ತಿಲ್ಲ . ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗೂ ಪ್ರತಿವಾದ ಪತ್ರಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಋಣಭಾರ

ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಇನ್ನೊಂದು ಋಣಭಾರ ಪ್ರಮಾಣ ಪತ್ರವು ನನ್ನ ತಾಯಿಯ ಹೆಸರು ಇದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಿಃ 29.06.1954 ರ ದಾನಪತ್ರಕ್ಕೂ ಮತ್ತು 1 ನೇ ಪ್ರತಿವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈಗ ಪ್ರತಿವಾದ ಪತ್ರದಲ್ಲಿ ಇರುವ ಇರುವ ಸ್ವತ್ತಿನ ದಾಖಲಾತಿಗಳು ಅಂದರೆ ನಿಡಿ-1 ರಿಂದ 16 ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಇರುವ ಸ್ವತ್ತಿನ ಸ್ವಾಧೀನಾನುಭವಕ್ಕೆ ನಾನು ಪ್ರತಿವಾದಿಗಳಿಗೆ ಅಡ್ಡಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ . ಎಲ್ಲಾ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ**
**ನಾಯ್ಯಾಧೀಶರು, ಹೊಸದುರ್ಗ.**